ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 1–4–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪೊಲೀಸ್ ಧ್ವಜ ದಿನಾಚರಣೆ :<br>ಮುಖ್ಯ ಅತಿಥಿಗಳು:<br>ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು,ಕರ್ನಾಟಕ ಸರ್ಕಾರ<br>ಅಧ್ಯಕ್ಷತೆ:<br>ಶ್ರೀ ಕೆ. ಜೆ. ಜಾರ್ಜ್, ಗೃಹ ಸಚಿವರು. | 02–04–2015<br>ಗುರುವಾರ<br>ಬೆಳಿಗ್ಗೆ<br>8–30 ಗಂಟೆಗೆ | ಕೆ.ಎಸ್.ಆರ್.ಪಿ. ಪೆರೇಡ್ ಮೈದಾನ, ಕೋರಮಂಗಲ, ಬೆಂಗಳೂರು |
| 2 | ಕರ್ನಾಟಕ ರಾಜ್ಯದಿಂದ ಹಜ್ ಯಾತ್ರೆಗೆ ತೆರಳಲಿರುವ ಯಾತ್ರಾರ್ಥಿಗಳ ಆಯ್ಕೆ ಪ್ರಕ್ರಿಯೆ (ಆನ್‌ಲೈನ್ ಖುರ್‍ರಾ) ಕಾರ್ಯಕ್ರಮ<br>ಉದ್ಘಾಟನೆ:<br>ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ | 02–4–2015<br>ಗುರುವಾರ<br>ಸಂಜೆ 4–00 ಗಂಟೆಗೆ | ಬ್ಯಾಂಕ್ವೆಟ್ ಹಾಲ್<br>ವಿಧಾನ ಸೌಧ<br>ಬೆಂಗಳೂರು |
| 2 | **Inaugural Ceremony of**<br>**ATM, General Post Office**<br>**Post Shoppe and Parcel Packing Centre**<br>**Circle Processing Centre (CBS)**<br>**Yelahanka e-Commerce** | **2-4-2015**<br>**Thursday**<br>**5.00 P.M.** | **Meghdoot Auditorium,**<br>**5th Floor,**<br>**General Post Office Building**<br>**Bangalore -560 001** |

| | | | |
|---|---|---|---|
| | **Business Centre & e-Commerce Metro Delivery**<br><br>**Laying of Foundation stone for Automated Mail Processing Centre**<br><br>**Awarding of BIS Certificate**<br><br>**by**<br><br>**Shri Ravi Shankar Prasad**<br><br>**Minister of Communication and IT. Govt. of India**<br><br>**Presence:**<br><br>**Shri H.N. Ananth Kumar**<br><br>**Minister for Chemicals and Fertilizers, Govt. of India**<br><br>**Shri D.V. Sadananda Gowda**<br><br>**Minister for Law and Justice** | | |
| **3** | **Release of Special Cover on " Golden Chariot"**<br><br>**Shri. Ravi Shankar Prasad**<br><br>**Minister of Communications & IT, Govt. of India**<br><br>**Presentation on "Adoption of Public Heritage Buildings by Corporates"**<br><br>**Presence:**<br><br>**Shri R.V. Deshpande**<br><br>**Minister of Higher Education & Tourism** | **2-4-2015**<br><br>**Thursday**<br><br>**5.20 P.M.** | **Meghdoot Auditorium,**<br><br>**5th Floor,**<br><br>**General Post Office Building**<br><br>**Bangalore -560 001** |

| | | | |
|---|---|---|---|
| | **Shri Arvind Jadhav, IAS,**<br>**Additional Chief Secretary Govt. of Karnataka**<br>**Ms. Ratna Prabha, IAS.,**<br>**Additional Chief Secretary**<br>**Govt. of Karnataka** | | |
| 5 | ಬೆಂಗಳೂರು ನಾಗರೀಕರೊಂದಿಗೆ ಸಂವಾದ<br>ಶ್ರೀ ಪ್ರಕಾಶ್ ಜಾವ್ಡೇಕರ್,<br>ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆ ಸಚಿವರು | 3–4–2015<br>ಶುಕ್ರವಾರ<br>ಬೆಳಿಗ್ಗೆ<br>6–30 ರಿಂದ 7–30 ಗಂಟೆಗೆ ವರೆಗೆ | ಕಬ್ಬನ್‌ಪಾರ್ಕ್<br>ಬೆಂಗಳೂರು |
| 6 | **Interaction with citizens of Bangalore**<br>**Sri Prakash Javdekar**<br>**Minister for Environment, Forests and Climate Change Government of India** | **3-4-2015**<br>**Friday**<br>**6-30 A.M. to 7-30 A.M.** | **Cubbon Park**<br>**Bangalore** |
| ೭ | ಐ.ಎ.ಎಸ್. ಅಕಾಂಕ್ಷಿಗಳಿಗೆ ನಿಶುಲ್ಕ ತರಬೇತಿ ಶಿಬಿರ<br>ಪುಸ್ತಕದ ಲೋಕಾರ್ಪಣೆ:<br>ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು,<br><u>ಇ–ಪುಸ್ತಕ ಬಿಡುಗಡೆ:</u><br>ಶ್ರೀ ಹೆಚ್. ಆಂಜನೇಯ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರು<br><u>ಮೊಬೈಲ್ ಪುಸ್ತಕ ಬಿಡುಗಡೆ:</u><br>ಶ್ರೀ ಆರ್. ರೋಷನ್ ಬೇಗ್, | 03–04–2015<br>ಶುಕ್ರವಾರ<br>ಮಧ್ಯಾಹ್ನ<br>3–30 ಗಂಟೆಗೆ | ದೇವರಾಜ್ ಅರಸ್ ಭವನ,<br>ವಸಂತ ನಗರ,<br>ಬೆಂಗಳೂರು. |

| | | | |
|---|---|---|---|
| | ಮೂಲಸೌಲಭ್ಯ, ಹಜ್ ಹಾಗೂ ವಾರ್ತಾ ಇಲಾಖೆ<br><br>**ಉಪಸ್ಥಿತಿ:**<br><br>ಶ್ರೀಮತಿ ಉಮಾಶ್ರೀ,<br><br>ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು. | | |

**ನಿರ್ದೇಶಕರ ಪರವಾಗಿ**

## ಪತ್ರಿಕಾ ಪ್ರಕಟಣೆ

# ಪೊಲೀಸ್ ಧ್ವಜ ದಿನಾಚರಣೆ

**ಬೆಂಗಳೂರು, ಏಪ್ರಿಲ್ 1 (ಕರ್ನಾಟಕ ವಾರ್ತೆ)**

ಪೊಲೀಸ್ ಧ್ವಜ ದಿನಾಚರಣೆ ಸಮಾರಂಭವನ್ನು ಏಪ್ರಿಲ್ 2 ರಂದು ಬೆಳಿಗ್ಗೆ 8–30 ಗಂಟೆಗೆ ಕೋರಮಂಗಲದ ಕೆ.ಎಸ್.ಆರ್.ಪಿ. ಮೈದಾನದಲ್ಲಿ ಏರ್ಪಡಿಸಲಾಗಿದೆ.

ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಗೃಹ ಸಚಿವ ಶ್ರೀ ಕೆ. ಜೆ. ಜಾರ್ಜ್ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಪ್ರತಿವರ್ಷ ಏಪ್ರಿಲ್ – 2 ರಂದು ರಾಜ್ಯದ ಎಲ್ಲಾ ಪೊಲೀಸ್ ಘಟಕಗಳಲ್ಲಿ ಪೊಲೀಸ್ ಧ್ವಜ ದಿನಾಚರಣೆಯನ್ನು ಆಚರಿಸಲಾಗುತ್ತದೆ. 1965 ಏಪ್ರಿಲ್ 2 ರಂದು ಕರ್ನಾಟಕ ರಾಜ್ಯ ಪೊಲೀಸ್ ಕಾಯ್ದೆ ಜಾರಿಯಲ್ಲಿ ಬಂದಿದ್ದು, ಈ ದಿನವನ್ನು ಪೊಲೀಸ್ ಧ್ವಜ ದಿನಾಚರಣೆಯನ್ನಾಗಿ ಆಚರಿಸಿ ಪೊಲೀಸ್ ಸೇವೆಯಲ್ಲಿ ಇರುವವರೆಲ್ಲರೂ ತಮ್ಮನ್ನು ಸೇವೆಗೆ ಪುನರ್ ಸಮರ್ಪಿಸಿಕೊಳ್ಳುವುದಲ್ಲದೇ, ಈ ದಿನವನ್ನು "ಪೊಲೀಸ್ ಕಲ್ಯಾಣ ದಿನ" ವನ್ನಾಗಿ ಕೂಡಾ ಆಚರಿಸಲಾಗುತ್ತದೆ. ಈ ವಿಶೇಷ ದಿನದಂದು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರನ್ನು ನೆನಸಿ ಅವರ ಕಲ್ಯಾಣ ಕಾರ್ಯಕ್ರಮವನ್ನು ಚಿಂತಿಸಲಾಗುತ್ತದೆ.

ಬಾಬು:ಜಿಪಿಆರ್.

# ಸೈನ್ಯಕ್ಕೆ ಭರ್ತಿ

**ಬೆಂಗಳೂರು, ಏಪ್ರಿಲ್ 1 (ಕರ್ನಾಟಕ ವಾರ್ತೆ)**

ಸೇವಾ ನಿರತ, ಮಾಜಿ ಸೈನಿಕರ, ಹಾಗೂ ಅವರ ಅವಲಂಭಿತರ ಮಕ್ಕಳಿಗೆ ಆರ್‌ಟಿಲರಿ ಸೆಂಟರ್, ನಾಸಿಕ್ ರಸ್ತೆ ಕ್ಯಾಂಪ್, ನಾಸಿಕ್‌ನಲ್ಲಿ ಏಪ್ರಿಲ್ 13 ರಿಂದ 15 ರವರೆಗೆ ಯುನಿಟ್ ಹೆಡ್‌ಕ್ವಾರ್ಟರ್ ಕೋಟಾದಡಿ ನೇಮಕಾತಿ ರ‍್ಯಾಲಿ ನಡೆಯಲಿದೆ.

ಈ ರ‍್ಯಾಲಿಯಲ್ಲಿ ಪಾಲ್ಗೊಳ್ಳುವ ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಭವನ, ಬೆಂಗಳೂರು – 560 025 ಇಲ್ಲಿನ ಸೂಚನಾ ಫಲಕವನ್ನು ವೀಕ್ಷಿಸಬಹುದಾಗಿದೆ.

ಬಾಬು:ಜಿಪಿಆರ್.

# ಪುಸ್ತಕ ಮಳಿಗೆ ಆರಂಭಿಸಲು ಅರ್ಜಿ ಆಹ್ವಾನ

**ಬೆಂಗಳೂರು, ಏಪ್ರಿಲ್ 1 (ಕರ್ನಾಟಕ ವಾರ್ತೆ)**

ಕನ್ನಡ ಪುಸ್ತಕ ಪ್ರಾಧಿಕಾರವು ಹಮ್ಮಿಕೊಂಡಿರುವ ಹಲವು ಯೋಜನೆಗಳಲ್ಲಿ ಜಿಲ್ಲಾವಾರು ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಯೂ ಒಂದು. ಕನ್ನಡ ಪುಸ್ತಕ ಪ್ರಾಧಿಕಾರವು ರಾಜ್ಯಾದ್ಯಂತ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳನ್ನು ಆರಂಭಿಸುತ್ತಿದೆ. ಜಿಲ್ಲೆ ಅಥವಾ ತಾಲ್ಲೂಕು ಕೇಂದ್ರದಲ್ಲಿ ಜನನಿಬಿಡ ಪ್ರದೇಶಗಳಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರದ ಹೆಸರಿನಲ್ಲಿ ಈ ಮಳಿಗೆಯನ್ನು ಆರಂಭಿಸಲು ಯೋಜಿಸಿದೆ.

ಈಗಾಗಲೇ ಖಾಸಗಿಯಾಗಿ ಪುಸ್ತಕ ಮಾರಾಟ ಮಳಿಗೆಯನ್ನು ಹೊಂದಿದವರೂ ಕೂಡ ಅರ್ಜಿ ಸಲ್ಲಿಸಬಹುದು. ಈ ಮಳಿಗೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಎಲ್ಲಾ ಅಕಾಡೆಮಿಗಳ ಪುಸ್ತಕವನ್ನು ಹಾಗೂ ಎಲ್ಲ ವಿಶ್ವವಿದ್ಯಾನಿಲಯಗಳ ಪ್ರಸಾರಾಂಗಗಳ ಪುಸ್ತಕಗಳನ್ನು ಅಲ್ಲದೆ ಮೌಲಿಕವಾದ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡಲು ಅವಕಾಶವಿದೆ. ಪುಸ್ತಕ ಮಳಿಗೆಯ ಬಾಡಿಗೆ ಹಾಗೂ ಮಾರಾಟಗಾರರ ಗೌರವ ಸಂಭಾವನೆಯಾಗಿ ಮಾಸಿಕ ಒಟ್ಟು ರೂ. 5000/– ಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರವು ಪಾವತಿ ಮಾಡುತ್ತದೆ. ಪ್ರಾಧಿಕಾರವು ಆಯ್ಕೆ ಮಾಡಿದ ಮಾರಾಟ ಪ್ರತಿನಿಧಿಯು ರಾಷ್ಟ್ರೀಕೃತ ಬ್ಯಾಂಕ್‌ನ ರೂ. 25,000/– ಗ್ಯಾರಂಟಿ ಪತ್ರವನ್ನು ಮಾರಾಟ ಮಳಿಗೆಯ ಆರಂಭದಲ್ಲಿ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗುತ್ತದೆ.

ಪೂರ್ಣ ಮಾಹಿತಿಗಾಗಿ ಕನ್ನಡ ಪುಸ್ತಕ ಪ್ರಾಧಿಕಾರದ ವೆಬ್‌ಸೈಟ್ www.kannadapusthakapradhikara.com ಅನ್ನು ನೋಡಬಹುದಾಗಿದೆ. ಆಸಕ್ತರು ವಿದ್ಯಾರ್ಹತೆ, ವಯಸ್ಸು, ಮಾರಾಟದ ಸ್ಥಳ, ಮಾರಾಟ ಮಳಿಗೆಯ ವಿವರ ಇತ್ಯಾದಿ ಸ್ವ–ವಿವರಗಳನ್ನು ಒಳಗೊಂಡ ಅರ್ಜಿಯನ್ನು ದಿನಾಂಕ 18–04–2015 ರೊಳಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ. ಸಿ. ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಬೇಕು.

ಬಾಬು:ಜಿಪಿಆರ್.

# ಐ.ಎ.ಎಸ್. ಅಕಾಂಕ್ಷಿಗಳಿಗೆ ನಿಶುಲ್ಕ ತರಬೇತಿ ಶಿಬಿರ.

**ಬೆಂಗಳೂರು, ಏಪ್ರಿಲ್ 1 (ಕರ್ನಾಟಕ ವಾರ್ತೆ)**

ಹಿಂದುಳಿದ ವರ್ಗಗಳ ನೇತಾರ ಮಾಜಿ ಮುಖ್ಯಮಂತ್ರಿ ಡಿ. ದೇವರಾಜು ಅರಸು ರವರು ಜನಿಸಿ 100 ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು 2015 ನೇ ವರ್ಷವನ್ನು ದೇವರಾಜ ಅರಸು ಶತನಮಾನೋತ್ಸವ ವರ್ಷವೆಂದು ಆಚರಿಸಲು ನಿರ್ಧರಿಸಿದ್ದು, ಈ ಹಿನ್ನೆಲೆಯಲ್ಲಿ ಹಲವಾರು ಅರ್ಥಪೂರ್ಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಡಿ. ದೇವರಾಜ ಅರಸುರವರ ಜನ್ಮ ಶತಮಾನೋತ್ಸವದ ಅಂಗವಾಗಿ " ಡಿ. ದೇವರಾಜ ಅರಸು" ರವರ ಹೆಸರಿನಲ್ಲಿ 100 ಸಂಖ್ಯಾಬಲದ 100 ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳನ್ನು ಪ್ರಾರಂಭಿಸಲಾಗುವುದು.

ಎಸ್.ಎಸ್.ಎಲ್.ಸಿ. ಪಿ.ಯು.ಸಿ., ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಶೇಕಡ 90 ಕ್ಕಿಂತ ಹೆಚ್ಚು ಅಂಕ ಗಳಿಸಿದ 2500 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ "ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರ" ನೀಡಲಾಗುವುದು. ಇದಕ್ಕಾಗಿ 4 ಕೋಟಿ ರೂ. ಒದಗಿಸಲಾಗುವುದು.

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಛಿಸುವ ಹಿಂದುಳಿದ ವರ್ಗಗಳ 100 ವಿದ್ಯಾರ್ಥಿಗಳಿಗೆ 10 ಲಕ್ಷ ರೂ. ಗಳಂತೆ "ಡಿ. ದೇವರಾಜು ಅರಸು ವಿದೇಶಿ ವ್ಯಾಸಂಗ ವೇತನ" ನೀಡಲಾಗುವುದು. ಇದಕ್ಕಾಗಿ ಒಟ್ಟು 10 ಕೋಟಿ ರೂ. ಒದಗಿಸಲಾಗುವುದು.

ಪಿ.ಎಚ್.ಡಿ. ಪೂರ್ಣಾವಧಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ 1000 ವಿದ್ಯಾರ್ಥಿಗಳಿಗೆ ಮಾಸಿಕ 5000/- ರೂ. ಗಳಂತೆ ವ್ಯಾಸಂಗ ವೇತನ/ಫೆಲೋಶಿಪ್ ನೀಡಲಾಗುವುದು. ಇದಕ್ಕಾಗಿ 5 ಕೋಟಿ ರೂ. ಅನುದಾನ ಮೀಸಲಿರಿಸಲಾಗಿದೆ .

ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಸ್ಥಾಪಿಸಿರುವ ಹಿಂದುಳಿದ ವರ್ಗಗಳ ಕೋಶವನ್ನು ಬಲಪಡಿಸಲು ಹಾಗೂ ಹೆಚ್ಚಿನ ಸಂಶೋಧನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ತಲಾ 5 ಲಕ್ಷ ರೂ. ಅನುದಾನ ನೀಡಲಾಗುವುದು. ಇದಕ್ಕಾಗಿ 50 ಲಕ್ಷ ರೂ. ಅನುದಾನ ಮೀಸಲಿರಿಸಲಾಗಿದೆ.

ಕರ್ನಾಟಕ ರಾಜ್ಯದಿಂದ ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಸೂಕ್ತ ತರಬೇತಿಯನ್ನು ಪ್ರಶಿಕ್ಷಣಾರ್ಥಿಗಳಿಗೆ ನೀಡಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. 2013-14 ರಲ್ಲಿ 389 ತರಬೇತಿದಾರರ ಪೈಕಿ 5 ಕನ್ನಡಿಗರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಿರುತ್ತಾರೆ. ಅವರ ಪೈಕಿ ಸುಮನ್ ಡಿ. ಪನಿಕರ್ ಐ.ಪಿ.ಎಸ್. ಪ್ರೊಬೆಷನರ್ ದಕ್ಷಿಣ ಕನ್ನಡದವರಾಗಿದ್ದು, ದಿನಾಂಕ 3-4-2015 ರಂದು ಯುವ ಪೀಳಿಗೆಗೆ ಪ್ರೇರೇಪಣೆಗಾಗಿ

ಏರ್ಪಡಿಸಿದ ಸ್ಪರ್ಧಾತ್ಮಕ ತರಬೇತಿ ಶಿಬಿರದಲ್ಲಿ ತಮ್ಮ ಅನುಭವಗಳನ್ನು ಹಂಚುತ್ತಾರೆ. ಅಂದು ಮಧ್ಯಾಹ್ನ 3–30 ದಿಂದ 5–00 ಗಂಟೆಯವರೆಗೆ ವಿವಿಧ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿದೆ.

ಶಿಬಿರದ ಕೊನೆಯಲ್ಲಿ ಸಂಜೆ 5–00 ಗಂಟೆಗೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶ್ರೀ ಹೆಚ್. ಆಂಜನೇಯ ಅವರು ಇನ್ನಿತರ ಗಣ್ಯರೊಂದಿಗೆ ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ರವರು ಡಾ. ರಜನೀಶ್ ಗೋಯಲ್‌ರವರೊಂದಿಗೆ 'ಐ.ಎ.ಎಸ್ ಎಂಬ ಕನಸು ಹೇಗೆ ನನಸುಗೊಳಿಸುವುದು' ಎಂಬುದರ ಬಗ್ಗೆ ಬರೆದ ಪುಸ್ತಕವನ್ನು ಅಭ್ಯರ್ಥಿಗಳಿಗಾಗಿ ಲೋಕಾರ್ಪಣೆ ಮಾಡಲಿದ್ದಾರೆ. ಸದರಿ ಪುಸ್ತಕವನ್ನು ಇ–ಪುಸ್ತಕ ರೂಪದಲ್ಲಿ ಯುವ ಪೀಳಿಗೆಗಾಗಿ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಚಾಲನೆ ನೀಡಲಿದ್ದಾರೆ. ಅದೇ ರೀತಿ ಮೂಲ 'ಸೌಕರ್ಯ, ವಾರ್ತಾ ಇಲಾಖೆ ಮತ್ತು ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಮೊಬೈಲ್ ಮೂಲಕ ಸಹ ಈ ಪುಸ್ತಕವನ್ನು ಓದಲು ಅವಕಾಶ ಮಾಡಿಕೊಡಲಿದ್ದಾರೆ. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶ್ರೀಮತಿ ಉಮಾಶ್ರೀ ಅವರು ಆಕಾಂಕ್ಷಿಗಳಿಗೆ ಮಾತೃ ಭಾಷೆ ಕನ್ನಡದಲ್ಲಿ ಯು.ಪಿ.ಎಸ್.ಸಿ. ಪರೀಕ್ಷೆಯನ್ನು ಬರೆಯಲು ಪ್ರೋತ್ಸಾಹಿಸಲಿದ್ದಾರೆ.

ಕನ್ನಡ ಪ್ರಭ ಮುಖ್ಯ ಸಂಪಾದಕರಾದ ಶ್ರೀ ವಿಶ್ವೇಶ್ವರ್ ಭಟ್ ಅವರು ಪರೀಕ್ಷಾರ್ಥಿಗಳಿಗಾಗಿ ಬರೆದಿರುವ ಅಂಕಣಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಅನುವು ಮಾಡಿ, ಸದರಿ ಸಮಾರಂಭದಲ್ಲಿ ಪ್ರಮುಖ ಟಿಪ್ಪಣಿ ವಾರ್ತೆ ನೀಡಲಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಉಪ ಕುಲಪತಿ ಶ್ರೀ ಬಿ. ತಿಮ್ಮೇಗೌಡರು ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಬೇಕಾಗಿರುವ ಸೌಲಭ್ಯಗಳ ಬಗ್ಗೆ ವಿವರಿಸಲಿದ್ದಾರೆ. ಐ.ಎ.ಎಸ್. ದಂಪತಿಯ ಕನಸುಗಳು ಪುಸ್ತಕದ ಮುನ್ನುಡಿಯನ್ನು ಬರೆದಿರುವ ಖ್ಯಾತ ಸಾಹಿತಿ ಮತ್ತು ಚಲನಚಿತ್ರ ನಿರ್ದೇಶಕ ಡಾ. ಬರಗೂರು ರಾಮಚಂದ್ರಪ್ಪ ಅವರು ಈ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ಆಸಕ್ತಿಯುಳ ಪ್ರತಿಭಾವಂತ ವಿದ್ಯಾರ್ಥಿಗಳು ಸದರಿ ಶಿಬಿರದಲ್ಲಿ ಭಾಗವಹಿಸಲು ಅಂದು 3.30 ಗಂಟೆಯೊಳಗೆ ದೇವರಾಜ್ ಅರಸ್ ಭವನದ ಸಭಾಂಗಣದಲ್ಲಿ ನೋಂದಣಿ ಮಾಡಿಕೊಳ್ಳುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.